SS – 039

ಮೂರನೇ ಸೆಮಿಸ್ಟರ್ ಬಿ.ಎ./ಬಿ.ಎಚ್.ಎಂ./ಬಿ.ಎಸ್.ಡಬ್ಲ್ಯೂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2018

(ಸಿಬಿಸಿಎಸ್) (F & R) (2015-16 ರ ನಂತರ)

ಕನ್ನಡ ಭಾಷಾ ಪತ್ರಿಕೆ – III

ಸುವರ್ಣ ಸಂಪದ

Time : 3 Hours

Max. Marks : 70

I. ಅ) ಪದ್ಯದ ಭಾವಾರ್ಥ ಬರೆಯಿರಿ. (೧×೬=೬)

ಅಕ್ಕ ಕೇಳವ್ವ ಅಕ್ಕಯ್ಯ ನಾನೊಂದು ಕನಸ ಕಂಡೆ !
ಅಕ್ಕಿಯಡಕೆ ಓಲೆ ತೆಂಗಿನಕಾಯಿ ಕಂಡೆ !
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ !
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ದೆರೆದೆನು !

ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ. (೨×೨=೪)

೧) ಕೃಷ್ಣೆ.

೨) ದೇವರ ದಾಸಿಮಯ್ಯ.

೩) ಕರ್ಣಾಟ ಭಾರತ ಕಥಾಮಂಜರಿ.

೪) ಅಲ್ಲಮಪ್ರಭು.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ. (೧×೧೦=೧೦)

೧) ಭರತ ಚಕ್ರವರ್ತಿಯ ದಿಗ್ವಿಜಯ ಯಾತ್ರೆಯನ್ನು ವರ್ಣಿಸಿ.

೨) ಕುರುಕ್ಷೇತ್ರ ಸಂಗ್ರಾಮಕ್ಕೆ ದ್ರೌಪದಿಯ ಕೇಶಪಾಶ ಕಾರಣವಾದ ಬಗೆ ಎಂತು ? ಚರ್ಚಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (೨×೫=೧೦)

೧) 'ಮಹಾರ್' ಜನಾಂಗದ ಪರವಾಗಿ ಅಂಬೇಡ್ಕರ್ ಹೋರಾಟ.

೨) ಪಿ. ಕಾಳಿಂಗರಾವ್‌ಗೆ ಹೋಟೆಲಿನಲ್ಲಿ ಸಂಭವಿಸಿದ ಘಟನೆ.

೩) ವಿಶ್ವೇಶ್ವರಯ್ಯನವರು ವೈದ್ಯರಿಗೆ ಕರ್ತವ್ಯ ನಿಷ್ಠೆ ತಿಳಿಸಿದ ಸಂದರ್ಭ.

ಪು.ತಿ.ನೋ.

Scanned by CamScanner

ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. (೧×೧೦=೧೦)

೧) ಠಾಕೂರರ ಮನೆತನದ ಬೆಳವಣಿಗೆಗೆ ಕಾರಣರಾದವರಾರು ? ವಿವರಿಸಿ.

೨) ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ಕಾಳಿಂಗರಾಯರ ಸಂಗೀತ ಕಾರ್ಯಕ್ರಮದ ಸ್ವಾರಸ್ಯವನ್ನು ವಿವರಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (೧×೫=೫)

೧) ನಿರಾಶ್ರಿತರ ತಾಣವಾಗುತ್ತಿರುವ ಅಂಡಮಾನ್.

೨) ಹರಿದ್ವಾರದ ಭೌಗೋಳಿಕ ಪರಿಸರ.

ಆ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. (೧×೧೦=೧೦)

೧) ಪೋರ್ಟ್‌ಬ್ಲೇರಿನಲ್ಲಿ ನೆಲೆಸಿರುವ ಕನ್ನಡಿಗರ ಪರಿಚಯವನ್ನು ಮಾಡಿಕೊಡಿ.

೨) ಭಾರತ ಹಾಗೂ ಅಮೇರಿಕಾದಲ್ಲಿ ಕ್ಷೌರ ಪದ್ಧತಿಯು ವಿಭಿನ್ನವಾಗಿರುವ ಬಗೆಯನ್ನು ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (೧×೫=೫)

೧) ಕಾವ್ಯ ಮತ್ತು ನಾಟಕಗಳಲ್ಲಿ ಚಿತ್ರಿತವಾಗಿರುವ ಅಶೋಕ ವೃಕ್ಷದ ವರ್ಣನೆ.

೨) ನಾಗರಿಕ ಬದುಕಿನ ಜೀವನದ ಗುಣಮಟ್ಟ ಕುಸಿಯುತ್ತಿರುವ ಬಗೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (೧×೧೦=೧೦)

೧) ದೇಶವನ್ನು ಮುಳುಗಿಸಿದ ಸಾಮ್ರಾಜ್ಯಶಾಹಿ ವಸ್ತುಗಳಾವುವು ? ಹೇಗೆ ? ವಿವರಿಸಿ.

೨) ಅಪ್ಪಟ ಪ್ರಗತಿ ಸೂಚ್ಯಂಕದ ಹೊಸ ಮಾನದಂಡಗಳನ್ನು ವಿವರಿಸಿ.

---

Scanned by CamScanner